## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE - 560 003**

## ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆ – 2021

**S.S.L.C SUPPLEMENTARY EXAMINATION – 2021**

## ಪತ್ರಿಕೆ / Paper – 02

**ವಿಷಯ : ಪ್ರಥಮ ಭಾಷೆ + ದ್ವಿತೀಯ ಭಾಷೆ + ತೃತೀಯ ಭಾಷೆ / ಎನ್.ಎಸ್.ಕ್ಯೂ.ಎಫ್**

**Subjects : First Language + Second Language + Third Language / NSQF**

**Key Answers**

**ಉತ್ತರಗಳ ಸಂಕೇತ**

**ಸಂಕೇತ ಸಂಖ್ಯೆ : 62-K** | **Code No. : 62-K**

**ಒಟ್ಟು ಪ್ರಶ್ನೆಗಳ ಸಂಖ್ಯೆ : 40+40+40=120]** | **[Total No. of Questions : 40+40+40=120**

## ತೃತೀಯ ಭಾಷೆ ಕನ್ನಡ

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ನಿಮಗೆ ನೀಡಿರುವ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್‌ನಿಂದ ಶೇಡ್ ಮಾಡಿರಿ.** **[40×1=40]**

**81) ಗೊರೂರರು ಅಮೆರಿಕಾದಲ್ಲಿ ಮಿತ್ರರನ್ನು ನೋಡಲು ಹೋಗಿದ್ದ ಸ್ಥಳದ ಹೆಸರು**

A) ಮಿನಿಪೊಲೀಸ್ ನಗರ  B) ನ್ಯೂಯಾರ್ಕ್

C) ಪ್ಯಾರಿಸ್  D) ಲಂಡನ್

**ಉತ್ತರ:** (A) ಮಿನಿಪೊಲೀಸ್ ನಗರ

**82) ಗೊರೂರರು ಬರೆದಿರುವ ಪ್ರವಾಸ ಕಥನ**

A) ನಮ್ಮ ಊರಿನ ರಸಿಕರು

B) ಹೇಮಾವತಿ

C) ಅಮೆರಿಕಾದಲ್ಲಿ ಗೊರೂರು

D) ಗರುಡಗಂಬದ ದಾಸಯ್ಯ

**ಉತ್ತರ:** (C) ಅಮೆರಿಕಾದಲ್ಲಿ ಗೊರೂರು

**83) ಕೊಡಗಿನ ಗೌರಮ್ಮನವರ ತಾಯಿಯ ಹೆಸರು**

A) ಆರ್ ಕಲ್ಯಾಣಮ್ಮ

B) ನಂಜಕ್ಕ

C) ತಿರುಮಲಾಂಬ

D) ಸರಸ್ವತಿಬಾಯಿ ರಾಜವಾಡೆ

**ಉತ್ತರ:** (B) ನಂಜಕ್ಕ

**84) ಗೌರಮ್ಮನವರು ಗಾಂಧೀಜಿಯವರ ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಜನೋದ್ಧಾರ ಸಂಬಂಧ ನಿಧಿಗೆ ನೀಡಿದ್ದು**

A) ತಮ್ಮ ಕೊರಳಿನ ಮಂಗಳಸೂತ್ರ, ಕಿವಿಯ ಓಲೆ ಮತ್ತು ಮೂಗುಬೊಟ್ಟಿನ ಹೊರತಾಗಿ ಉಳಿದೆಲ್ಲ ಒಡವೆಗಳನ್ನು

B) ತಮ್ಮ ಮನೆಯನ್ನು

C) ತಮ್ಮ ಬ್ಯಾಂಕಿನ ಖಾತೆಯಲ್ಲಿರುವ ಎಲ್ಲ ಹಣವನ್ನು

D) ತಮ್ಮಲ್ಲಿದ್ದ ಪುಸ್ತಕ ಭಂಡಾರವನ್ನು

**ಉತ್ತರ:** (A) ತಮ್ಮ ಕೊರಳಿನ ಮಂಗಳಸೂತ್ರ, ಕಿವಿಯ ಓಲೆ ಮತ್ತು ಮೂಗುಬೊಟ್ಟಿನ ಹೊರತಾಗಿ ಉಳಿದೆಲ್ಲ ಒಡವೆಗಳನ್ನು

**85) ಹುಲಗೂರಿನ ಸಂತ**

A) ಖಾದರ್‌ಷಾ ವಲಿ

B) ಹಜರತ ಇಮಾಮ ಸಾಹೇಬ

C) ಮೊಹಮ್ಮದ್ ಶರೀಫ

D) ಗುರುಗೋವಿಂದ ಭಟ್ಟ

**ಉತ್ತರ:** (A) ಖಾದರ್‌ಷಾ ವಲಿ

**86) ಶರೀಫರ ಜನ್ಮಸ್ಥಳ**

A) ಕಳಸ ಗ್ರಾಮ

B) ಗುಡಗೇರಿ

C) ಶಿಶುನಾಳ ಗ್ರಾಮ

D) ನವಲಗುಂದ

**ಉತ್ತರ:** (C) ಶಿಶುನಾಳ ಗ್ರಾಮ

**87) ಭಾರತದಲ್ಲಿ ಚಲೇಜಾವ್ ಚಳವಳಿ ನಡೆದ ವರ್ಷ**

A) 1947

B) 1942

C) 1924

D) 1909

**ಉತ್ತರ:** (B) 1942

**88) ಗಾಂಧೀಜಿಯವರು ಹೇಳಿಕೊಟ್ಟಿರುವ ಮಂತ್ರ**

A) 'ಬ್ರಿಟಿಷರೇ, ಭಾರತ ಬಿಟ್ಟು ತೊಲಗಿರಿ'

B) 'ಭಾರತ ಮಾತೆಗೆ ಜಯವಾಗಲಿ'

C) 'ವಂದೇ ಮಾತರಂ'

D) 'ಮಾಡು, ಇಲ್ಲವೆ ಮಡಿ'

**ಉತ್ತರ:** (D) 'ಮಾಡು, ಇಲ್ಲವೆ ಮಡಿ'

**89) ಪೋರ್ಚುಗೀಸರನ್ನು ಸೋಲಿಸಿದ ಉಲ್ಲಾಳದ ರಾಣಿ**

A) ಕೆಳದಿ ಚೆನ್ನಮ್ಮ

B) ಬೆಳವಡಿ ಮಲ್ಲಮ್ಮ

C) ಅಬ್ಬಕ್ಕದೇವಿ

D) ಕಿತ್ತೂರು ಚೆನ್ನಮ್ಮ

**ಉತ್ತರ:** (C) ಅಬ್ಬಕ್ಕದೇವಿ

**90) ಕೆಳದಿಯ ಮೇಲೆ ದಂಡೆತ್ತಿ ಬಂದ ಔರಂಗಜೇಬನ ಮಗ**

A) ಶಾಂತಯ್ಯ  B) ಸಂಗೊಳ್ಳಿ ರಾಯಣ್ಣ

C) ಅಜಮತಾರ  D) ರಾಜಾರಾಮ

**ಉತ್ತರ:** (C) ಅಜಮತಾರ

**91) ಕಿತ್ತೂರು ರಾಣಿ ಚೆನ್ನಮ್ಮಳನ್ನು ಸೆರೆಮನೆಯಲ್ಲಿ ಭೇಟಿಯಾಗಲು ಬಂದ ವೀರ**

A) ಸಂಗೊಳ್ಳಿ ರಾಯಣ್ಣ  B) ಶಿವಾಜಿ

C) ಪಿತ್ರೋ  D) ಔರಂಗಜೇಬ್

**ಉತ್ತರ:** (A) ಸಂಗೊಳ್ಳಿ ರಾಯಣ್ಣ

**92) 'ರಾಮಸಿಂಗ್ ಚೌಕಾ' ಎಂಬ ಏಕಾಂಕ ನಾಟಕದಿಂದ ಆಯ್ದ ಗದ್ಯಪಾಠ**

A) ಕರ್ನಾಟಕದ ವೀರವನಿತೆಯರು  B) ಧ್ವಜ ರಕ್ಷಣೆ

C) ಲಾಕಪ್ಪಿನಲ್ಲಿ ಒಂದು ರಾತ್ರಿ  D) ಕೊಡಗಿನ ಗೌರಮ್ಮ

**ಉತ್ತರ:** (B) ಧ್ವಜ ರಕ್ಷಣೆ

**93) ಕೊಡಗಿನ ಗೌರಮ್ಮನವರು ಅಕಾಲ ಮರಣಕ್ಕೆ ಗುರಿಯಾಗುವಂತೆ ಮಾಡಿದ ಹೊಳೆಯ ಹೆಸರು**

A) ಹಟ್ಟಿಹೊಳೆ  B) ನಾಗರಹೊಳೆ

C) ತಟ್ಟಿಹೊಳೆ  D) ಗುಡ್ಡದಂಗಡಿಹೊಳೆ

**ಉತ್ತರ:** (A) ಹಟ್ಟಿಹೊಳೆ

**94) ಶರೀಫರ ಮೇಲಿನ ವಿಶೇಷ ಪೂಜ್ಯ ಭಾವನೆಯಿಂದ ದವಸಧಾನ್ಯಗಳನ್ನು ಕೊಟ್ಟು ಕಳುಹಿಸುತ್ತಿದ್ದವರು**

A) ಗುರುಗೋವಿಂದ ಭಟ್ಟರು

B) ಕುಂಬಾರ ಮುದುಕಪ್ಪ

C) ಗುಡಿಗೇರಿ ಕುಲಕರ್ಣಿ

D) ಮುದುಕಪ್ಪನ ಮಗಳು ಬಸಮ್ಮ

**ಉತ್ತರ:** (C) ಗುಡಿಗೇರಿ ಕುಲಕರ್ಣಿ

**95) ಕವಿ ಸತೀಶ ಕುಲಕರ್ಣಿಯವರು ಇಂತಹ ಮನುಕುಲವನ್ನು ಕಟ್ಟುತ್ತೇವೆ ಎಂದಿದ್ದಾರೆ**

A) ಜಾತಿ–ಭೀತಿ ಇಲ್ಲದ

B) ಕುಲವೆನ್ನದ

C) ಗೋಳು, ಗುಂಡಿಲ್ಲದ

D) ನೂರು ಮನಸಿನ ಕೋಟಿ ಕನಸಿನ

**ಉತ್ತರ:** (B) ಕುಲವೆನ್ನದ

**96) ಸತೀಶ ಕುಲಕರ್ಣಿಯವರ 'ಕಟ್ಟತೇವ ನಾವು' ಕವಿತೆಯಲ್ಲಿ ಬರುವ ಕ್ರಾಂತಿಕಾರಿಗಳು ಈ ಕುಂಡವನ್ನು ಹೊತ್ತು ಮುಳ್ಳ ತುಳಿಯುತ್ತೇವೆಂದು ಹೇಳಿದ್ದಾರೆ**

A) ಕ್ರಾಂತಿ ಕೆಂಡದ

B) ಕಂಡ ಕನಸುಗಳ

C) ಒಡೆದ ಮನಸುಗಳ

D) ಮನುಕುಲದ

**ಉತ್ತರ:** (A) ಕ್ರಾಂತಿ ಕೆಂಡದ

**97) ಬಿಳಿಮಿನಾರು ಈ ಧರ್ಮದ ಸಂಕೇತವಾಗಿದೆ**

A) ಹಿಂದೂ

B) ಕ್ರೈಸ್ತ

C) ಮುಸ್ಲಿಂ

D) ಬೌದ್ಧ

**ಉತ್ತರ:** (C) ಮುಸ್ಲಿಂ

**98) ಕಂದ, ವೃತ್ತ, ತ್ರಿಪದಿ, ವಚನ ಇತ್ಯಾದಿ ಸಾಹಿತ್ಯರೂಪಗಳಲ್ಲಿ ಅಡಗಿರುವುದು**

A) ಬೆಳಕಿನ ಸತ್ವ

B) ಧರ್ಮದುಸಿರು

C) ಗಾಳಿಮುಗಿಲು

D) ರಸ ಕವಿತ್ವ

**ಉತ್ತರ:** (D) ರಸ ಕವಿತ್ವ

**99) ಕರ್ನಾಟಕ ವಂಗ ಆಂಧ್ರ ಭಾರತೀಯರೊಂದೆ. ಪೂರ್ವೋತ್ತರ ಪಡು ತೆಂಕಣ**

A) ರಸ ಕವಿತ್ವ ಒಂದೆ

B) ಗಾಳಿ ಮುಗಿಲು ಒಂದೆ

C) ಧರ್ಮದುಸಿರು ಒಂದೆ

D) ಹುಲ್ಲು ಬಣ್ಣ ಒಂದೆ

**ಉತ್ತರ:** (B) ಗಾಳಿ ಮುಗಿಲು ಒಂದೆ

**100) ಬಸವಣ್ಣನವರ ವಚನದಲ್ಲಿ ಹೇಳಿರುವಂತೆ ದೇವಲೋಕ ಎಂದರೆ**

A) ಮಿಥ್ಯವನ್ನು ನುಡಿಯುವುದು

B) ಸತ್ಯವನ್ನು ನುಡಿಯುವುದು

C) ಅನಾಚಾರದಿಂದ ಕೂಡಿರುವುದು

D) ಅಂತರಂಗ ಶುದ್ಧವಿಲ್ಲದಿರುವುದು

**ಉತ್ತರ:** (B) ಸತ್ಯವನ್ನು ನುಡಿಯುವುದು

**101)ಬಸವಣ್ಣನವರ ವಚನಗಳ ಅಂಕಿತ**

A) ಪುರಂದರ ವಿಠಲ

B) ಕಾಗಿನೆಲೆ ಆದಿಕೇಶವ

C) ಕೂಡಲ ಸಂಗಮದೇವ

D) ಗುಹೇಶ್ವರಾ

**ಉತ್ತರ:** (C) ಕೂಡಲ ಸಂಗಮದೇವ

**102) ಪುರಂದರದಾಸರ ಮೊದಲ ಹೆಸರು**

A) ವ್ಯಾಸರಾಯ

B) ವರದಪ್ಪನಾಯಕ

C) ಶ್ರೀನಿವಾಸನಾಯಕ

D) ಪುರಂದರನಾಯಕ

**ಉತ್ತರ:** (C) ಶ್ರೀನಿವಾಸನಾಯಕ

**103) ಉದರ ವೈರಾಗ್ಯವೆಂದರೆ**

A) ಕಷ್ಟಪಟ್ಟು ಕೆಲಸ ಮಾಡುವುದು

B) ಗುರು–ಹಿರಿಯರನ್ನು ಸ್ಮರಿಸುವುದು

C) ಪರಮಾತ್ಮನಲ್ಲಿ ಭಕ್ತಿ–ಭಾವ ಹೊಂದಿರುವುದು

D) ಹೊಟ್ಟೆ ಪಾಡಿಗಾಗಿ ವೈರಾಗ್ಯದ ಸೋಗು ಹಾಕುವುದು

**ಉತ್ತರ:** (D) ಹೊಟ್ಟೆ ಪಾಡಿಗಾಗಿ ವೈರಾಗ್ಯದ ಸೋಗು ಹಾಕುವುದು

**104)ಡಾಂಭಿಕ ಭಕ್ತನು ಮನಸ್ಸಿನಲ್ಲಿ ಈ ಗುಣಗಳನ್ನು ತುಂಬಿಟ್ಟುಕೊಂಡು ಬದಿಯಲ್ಲಿದ್ದವರಿಗೆ ಆಶ್ಚರ್ಯವನ್ನುಂಟು ಮಾಡುವನು**

A) ದೇವರಲ್ಲಿ ಪೂಜ್ಯ ಮನೋಭಾವ

B) ಗುರು–ಹಿರಿಯರಲ್ಲಿ ಗೌರವ ಮನೋಭಾವ

C) ಮದ, ಮತ್ಸರ, ಕ್ರೋಧ

D) ಪ್ರೀತಿ – ಪ್ರೇಮ

**ಉತ್ತರ:** (C) ಮದ, ಮತ್ಸರ, ಕ್ರೋಧ

**105) 'ಜನಪದ ಗೀತೆ' ಪದ್ಯದಲ್ಲಿ ಜನಪದರು ಈ ಸನ್ನಿವೇಶವನ್ನು ಕುರಿತು ವರ್ಣಿಸಿದ್ದಾರೆ**

A) ಮಕ್ಕಳ ಆಟೋಟ

B) ಹೆಣ್ಣಿನ ತಾಯ್ತನ

C) ಜನರ ಉಡುಗೆ–ತೊಡುಗೆ

D) ಮಳೆದೇವರನ್ನು ಕರೆಯುವಿಕೆ

**ಉತ್ತರ:** (D) ಮಳೆದೇವರನ್ನು ಕರೆಯುವಿಕೆ

**106) ಸಾವಿರಾರು ಕೆರೆಗಳು ತುಂಬಬೇಕಾದರೆ ಈ ಮಳೆಯು ಸುರಿಯಬೇಕೆಂದು ರೈತರು ಬಯಸುತ್ತಾರೆ**

A) ಮೃಗಶಿರಾ

B) ಸ್ವಾತಿ

C) ಆರಿದ್ರಾ

D) ರೋಹಿಣಿ

**ಉತ್ತರ:** (B) ಸ್ವಾತಿ

**107) ಜನಪದಗೀತೆ ಪದ್ಯದ ಆಶಯ**

A) ಸಮೃದ್ಧವಾಗಿ ಮಳೆ ಬೆಳೆಯಾಗಿ ಎಲ್ಲರೂ ಸುಖವಾಗಿರಲಿ

B) ಸಮೃದ್ಧವಾಗಿ ಮಳೆ ಬೆಳೆಯಾಗದೆ ಎಲ್ಲರೂ ಸುಖವಾಗಿರಲಿ

C) ಜನರೆಲ್ಲರೂ ನೆಮ್ಮದಿಯಿಲ್ಲದೆ ಬದುಕಲಿ

D) ಸಮೃದ್ಧವಾಗಿ ಮಳೆಯಾಗಿ, ಸರಿಯಾಗಿ ಬೆಳೆ ಬರದೆ ಜನರು ಅಶಾಂತಿಯಿಂದ ಬದುಕಲಿ

**ಉತ್ತರ:** (A) ಸಮೃದ್ಧವಾಗಿ ಮಳೆ ಬೆಳೆಯಾಗಿ ಎಲ್ಲರೂ ಸುಖವಾಗಿರಲಿ

**108) ಸತೀಶ ಕುಲಕರ್ಣಿ ಕಟ್ಟ ಬಯಸಿದ ನಾಡು**

A) ಜಾತಿ–ಭೀತಿ ಇಲ್ಲದ ನಾಡು

B) ಒಡೆದ ಮನಸುಗಳ ನಾಡು

C) ಗೋಳಿಲ್ಲದ ಗುಂಡಿಲ್ಲದ ನಾಡು

D) ಕೋಟಿ ಕನಸಿನ ನಾಡು

**ಉತ್ತರ:** (C) ಗೋಳಿಲ್ಲದ ಗುಂಡಿಲ್ಲದ ನಾಡು

**109) ಧರ್ಮಪದನಿಗೆ ಬುತ್ತಿಕೊಟ್ಟ ಶಿಲ್ಪಿಯ ಮುಖವು ಬಿಳಿಚಿಕೊಳ್ಳಲು ಕಾರಣ**

A) ಚಿಕ್ಕ ಹುಡುಗ ಅರ್ಧಗಂಟೆಯಲ್ಲಿ ಕಳಸವನ್ನು ಕೂರಿಸಿದ್ದರಿಂದ

B) ರಾಜನಿಂದ ಬಿರುದು ಬಾವಲಿಗಳನ್ನು ಪಡೆದುದರಿಂದ

C) ಇಷ್ಟು ಚಿಕ್ಕ ಪ್ರತಿಭೆಯ ಮುಂದೆ ಸಣ್ಣವರಾದೆವೆಂದು ತಿಳಿದು

D) ಬುತ್ತಿಯಲ್ಲಿ ಬೆರೆಸಿದ ವಿಷವನ್ನು ತಿಂದ ಗಿಡುಗವು ಸತ್ತಿದ್ದನ್ನು ಕಂಡು ತನ್ನ ವಿಷಯ ಬಯಲಾಯಿತೆಂದು

**ಉತ್ತರ:** (D) ಬುತ್ತಿಯಲ್ಲಿ ಬೆರೆಸಿದ ವಿಷವನ್ನು ತಿಂದ ಗಿಡುಗವು ಸತ್ತಿದ್ದನ್ನು ಕಂಡು ತನ್ನ ವಿಷಯ ಬಯಲಾಯಿತೆಂದು

**110) ಧರ್ಮಪದನ ತಾಯಿ**

A) ಪ್ರೇಮಾಭಟ್ B) ಚಂದ್ರಲೇಖಾ

C) ಗೀತಾ D) ಚಂದ್ರಭಾಗಾ

**ಉತ್ತರ:** (B) ಚಂದ್ರಲೇಖಾ

**111) ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕಾಕ್ಷರಗಳು**

A) ಅ, ಇ, ಉ, ಋ, ಎ B) ಆ, ಈ, ಊ, ಏ, ಒ

C) ಯ, ರ, ಲ, ವ, ಶ D) ಙ, ಞ, ಣ, ನ, ಮ

**ಉತ್ತರ:** (D) ಙ, ಞ, ಣ, ನ, ಮ

**112) ಮಕ್ಕಳು ಹಾಲನ್ನು ಕುಡಿಯುತ್ತಾರೆ ಮತ್ತು ಹಣ್ಣನ್ನೂ ತಿನ್ನುತ್ತಾರೆ. ಈ ವಾಕ್ಯವು**

A) ಮಿಶ್ರ ವಾಕ್ಯ B) ಸಾಮಾನ್ಯ ವಾಕ್ಯ

C) ಸಂಯೋಜಿತ ವಾಕ್ಯ D) ಪ್ರಶ್ನಾರ್ಥಕ ವಾಕ್ಯ

**ಉತ್ತರ:** (C) ಸಂಯೋಜಿತ ವಾಕ್ಯ

**113) 'ವೈರಾಗ್ಯವಿದು' ಪದವು ಈ ಸಂಧಿಗೆ ಉದಾಹರಣೆಯಾಗಿದೆ**

A) ಲೋಪ ಸಂಧಿ B) ಸವರ್ಣದೀರ್ಘ ಸಂಧಿ

C) ಆಗಮ ಸಂಧಿ D) ಗುಣ ಸಂಧಿ

**ಉತ್ತರ:** (C) ಆಗಮ ಸಂಧಿ

**114) 'ಹೆಬ್ಬಾಗಿಲು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ**

A) ತತ್ಪುರುಷ ಸಮಾಸ B) ಕರ್ಮಧಾರಯ ಸಮಾಸ

C) ಕ್ರಿಯಾ ಸಮಾಸ D) ಬಹುವ್ರೀಹಿ ಸಮಾಸ

**ಉತ್ತರ:** (B) ಕರ್ಮಧಾರಯ ಸಮಾಸ

**115)** **ಮಕ್ಕಳೆಲ್ಲರೂ ಶಾಲೆಯ ಆವರಣದೊಳಗೆ ಬೇಗಬೇಗನೆ ನಡೆದರು. ಈ ವಾಕ್ಯದಲ್ಲಿರುವ 'ಬೇಗಬೇಗನೆ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ**

A) ಜೋಡುನುಡಿ

B) ಅನುಕರಣಾವ್ಯಯ

C) ನುಡಿಗಟ್ಟು

D) ದ್ವಿರುಕ್ತಿ

**ಉತ್ತರ:** (D) ದ್ವಿರುಕ್ತಿ

**116)** **ಕಾರಂತರಿಗೆ ಸಂಗೀತ ಮತ್ತು ನಾಟಕದಲ್ಲಿ ತುಂಬಾ ಆಸಕ್ತಿಯಿತ್ತು. ಈ ವಾಕ್ಯದಲ್ಲಿನ 'ನಾಟಕದಲ್ಲಿ' ಪದದಲ್ಲಿರುವ ವಿಭಕ್ತಿ**

A) ಪ್ರಥಮಾ

B) ದ್ವಿತೀಯಾ

C) ಸಪ್ತಮೀ

D) ಷಷ್ಠೀ

**ಉತ್ತರ:** (C) ಸಪ್ತಮೀ

**117)** **ಹರ್ಷ, ಅಚ್ಚರಿ, ದುಃಖ, ಕೋಪ, ತಿರಸ್ಕಾರ ಇತ್ಯಾದಿ, ಮನಸ್ಸಿನ ಭಾವನೆಗಳನ್ನು ವ್ಯಕ್ತ ಪಡಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ**

A) ವಿವರಣಾತ್ಮಕ ಚಿಹ್ನೆ

B) ಭಾವಸೂಚಕ ಚಿಹ್ನೆ

C) ಪ್ರಶ್ನಾರ್ಥಕ ಚಿಹ್ನೆ

D) ಉದ್ಧರಣ ಚಿಹ್ನೆ

**ಉತ್ತರ:** (B) ಭಾವಸೂಚಕ ಚಿಹ್ನೆ

**118)** **'ಅಕ್ಕ' ಪದದ ಅನ್ಯಲಿಂಗ ರೂಪ**

A) ತಂಗಿ

B) ತಮ್ಮ

C) ಅಮ್ಮ

D) ಅಣ್ಣ

**ಉತ್ತರ:** (D) ಅಣ್ಣ

**119) 'ದೃಷ್ಟಿ' ಪದದ ತದ್ಭವ ರೂಪ**

A) ದಿಟ್ಟಿ

B) ಬಂಜೆ

C) ಮೊಗ

D) ಬಣ್ಣ

**ಉತ್ತರ:** (A) ದಿಟ್ಟಿ

**120)ಅಧಿಕಾರಿಗಳಿಗೆ ಪತ್ರ ಬರೆಯುವಾಗ ಮುಕ್ತಾಯ ಹೀಗಿರಬೇಕು**

A) ಆಶೀರ್ವಾದಗಳು

B) ವಂದನೆಗಳೊಂದಿಗೆ, ತಮ್ಮ ವಿಶ್ವಾಸಿ

C) ನಮಸ್ಕಾರಗಳು

D) ಮಾನ್ಯರೇ

**ಉತ್ತರ:** (B) ವಂದನೆಗಳೊಂದಿಗೆ, ತಮ್ಮ ವಿಶ್ವಾಸಿ